ಶ್ರೀ ಎಂ. ಎಸ್. ಕೃಷ್ಣನ್.—ನನ್ನ (ಈ) ಪ್ರಶ್ನೆ ಬಿಟ್ಟಿಟ್ಟ ಆಹಾರ ಧಾನ್ಯಗಳನ್ನು ಪತ್ತೇ ಹಚ್ಚಲು ಕಾರ್ಮಿಕ ಸಂಘ, ಯುವಜನ ಸಂಸ್ಥೆಗಳಂತಹ ವಿವಿಧ ಜನತಾ ಸಂಸ್ಥೆಗಳ ಸಹಕಾರವನ್ನು ಪಡೆಯಲು ಸರ್ಕಾರದವರು ಯೋಚಿಸುತ್ತಿರುವರೇ ಎಂದು ಕೇಳಿದ್ದಕ್ಕೆ, ತಮ್ಮ ಉತ್ತರದಲ್ಲಿ, "whenever found necessary" ಎಂದು ಹೇಳಿದ್ದೀರಿ. ಯಾವ ಕಾಲದಲ್ಲಿ ಸಹಕಾರವನ್ನು ಪಡೆದಿದ್ದೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಆಗುತ್ತದೆಯೇ? ಯಾರ ಯಾರ ಸಹಕಾರವನ್ನು ಪಡೆದಿದ್ದೀರಿ ಎಂಬುದನ್ನು, ಹಾಗೂ ಇದರ ಬಗ್ಗೆ ಸರ್ಕಾರದವರ ಸ್ಪಷ್ಟವಾದ ಧೋರಣೆಯೇನು ಎಂಬುದನ್ನು ಹೇಳಬೇಕು.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರಿಗೆ ಇದು ಗೊತ್ತಿರಲಿಕ್ಕೆ ಸಾಕು. ರಾಜ್ಯದಲ್ಲಿ ಲಕ್ಷಾವಧಿ, ಕೋಟ್ಯಾವಧಿ ಬೆಲೆ ಬಾಳತಕ್ಕ ಆಹಾರಧಾನ್ಯಗಳನ್ನು ಕೊಡದೇ, ಹೊರಗೇ ತೆಗೆಯದೇ ಇರುವ ವಿಷಯವನ್ನು ಅಧಿಕಾರೇತರರು, ಕಾರ್ಯಕರ್ತರು ಸಮಾಚಾರ ಕೊಟ್ಟಿದ್ದಾರೆ. ಆ ಸಮಾಚಾರದ ಆಧಾರದ ಮೇಲೆ ಹೊಗೆ ತೆಗೆಯುವಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಇಂಥ ಸಮಯದಲ್ಲಿ ತಮ್ಮೆಲ್ಲರ ಸಹಕಾರವನ್ನು ಕೋರುತ್ತೇವೆ. ಮಾನ್ಯ ಸದಸ್ಯರು ಉತ್ತಮವಾದ ಸಲಹೆಗಳನ್ನು ಕೊಟ್ಟರೆ ಅವಶ್ಯಕವಾಗಿ ಸ್ವಾಗತ ಮಾಡುತ್ತೇವೆ.

Additional Information in Reply to Question No. 760.

ಶ್ರೀ ಎನ್. ಹುಚ್ಚಮಾಸ್ತಿಗೌಡ.—39ನೇ ಪಟ್ಟಿಯ 483(760)ನೇ ಶ್ರೀ ಎಸ್. ಬಂಗಾರಪ್ಪನವರ ಪ್ರಶ್ನೆಗೆ ಕೊಟ್ಟ ಉತ್ತರದಲ್ಲಿ ಒಂದು ತಪ್ಪು ಆಗಿದೆ ಅದನ್ನು ತಿದ್ದಿಕೊಳ್ಳಬೇಕಾಗಿ ವಿನಂತಿ.

ಮಾನ್ಯ ಬಂಗಾರಪ್ಪನವರ ಪ್ರಶ್ನೆಗೆ ಉತ್ತರಿಸುತ್ತಾ "1973ನೇ ಇಸ್ವಿ ಸೆಪ್ಟೆಂಬರ್" ಎಂದು ಹೇಳಿದ್ದೆ, ಆದರೆ

ಆದರೆ ಅದು ನೇಮಕವಾಗಿರುವುದು "1973ನೇ ಇಸ್ವಿಯ ಜುಲೈ 13" ನೇ ತಾರೀಖು ಎಂದು ತಿದ್ದುಪಡಿ ಮಾಡಿಕೊಳ್ಳಬೇಕು.

BENEFITS TO LECTURERS WORKING IN POLYTECHNICS

911. Smt. C. NAGAMMA KESHAVA MURTHY (Davanagere).—

Will the Minister for Education be pleased to state :—

(*a*) wehther it is a fact that the Government College lecturers have been granted the following benefits by the Government :

(1) Gazetting the cadre of Lecturers ;

(2) Promotional opportunities to Lecturers with 15 years of Service to the cadre of Readers ;

(*b*) whether the Government has received any representations from the Lecturers working in Polytechnics requesting the extension of the similar benefits to them ;

(*c*) if so, the action taken in the matter ?

Sri M. MALLIKARJUNASWAMY (Minister for Education).—

(*a*).—

(1) Yes.

(2) 15 years of satisfactory Service.

(*b*) Yes.

(*c*) Under consideration of Government.

Smt. C. NAGAMMA KESHAVA MURTHY.—While appreciating the stand taken by the Government in granting the benefits to the lecturers of the Collegiate Education, May I know the reasons why the small section of the Lecturers working in Polyechnics are being excluded?

† **Sri M. MALLIKARJUNASWAMY.**—They are not being excluded. It is under the active considcration of the Government and now the matter has been referred to the Finance Department and shortly we are taking a decision.

Smt. C. NAGAMMA KESHAVA MURTHY.—In answer to (e), the Hon. Minister has stated that it is under consideration of Government. May I knew whether it will be finalised before the next acadmic year starts?

Sri M. MALLIKARJUNASWAMY,—The file has already been referred to the Finance Department on 10—4—1974 and now it is under examination.

ಶ್ರೀ ಟಿ. ಎಂ. ಮಂಜುನಾಥ್.—ಸರ್ಕಾರಿ ಕಾಲೇಜುಗಳಿಗೆ ರೀಡರನ್ನು ನೇಮಕ ಮಾಡುವ ಸಂದರ್ಭದಲ್ಲಿ ತಾವು ಲೋಕ ಸೇವಾ ಆಯೋಗಕ್ಕೆ ಲಿಸ್ಟ್ ಕಳುಹಿಸಿರುತ್ತೀರಿ. ಲಿಸ್ಟ್ ಪ್ರಕಾರ ಎಷ್ಟು ಖಾಲಿ ಸ್ಥಾನಗಳು ಇವೆ ಅದನ್ನು ನೇಮಕ ಮಾಡಿ ಎಂದು ಲಿಸ್ಟನ್ನು ಕಳುಹಿಸಿದ್ದಾರೆ. ಅಂಥ ಸಂದರ್ಭದಲ್ಲಿ ಫಿನಾನ್ಸ್ ಡಿಪಾರ್ಟ್‌ಮೆಂಟಿನ ಸೆಕ್ರಟರಿಯವರು ಎಲ್ಲರನ್ನೂ ರೀಡರ್ ಆಗಿ ನೇಮಕ ಮಾಡುವ ಬಗ್ಗೆ ಪಟ್ಟು ಕಳುಹಿಸಿದ್ದಾರಾ? ಆ ರೀತಿ ಇಲ್ಲದಿದ್ದರೆ, ಕಳುಹಿಸದೇ ಇರುವುದಕ್ಕೆ ಕಾರಣವೇನು?

Sri M. MALLIKARJUNASWAMY.—What the Hon. Member has mentioned does not arise out of this question.

ಶ್ರೀ ಎಂ. ಎಸ್. ಕೃಷ್ಣನ್.—ಪಾಲಿಟೆಕ್ನಿಕ್ ಲೆಕ್ಚರರ್ಸ್ ವಿಷಯವನ್ನು ಪರಿಶೀಲಿಸುತ್ತೇವೆಂದು ಹೇಳಿದ್ದೀರಿ. ಅವರನ್ನು ಬಿಟ್ಟಿರುವುದಕ್ಕೆ ಕಾರಣವೇನು ಹೇಳುತ್ತೀರಾ? ಲೆಕ್ಚರರ್ಸ್ ಎಂದು ತೀರ್ಮಾನವಾದ ಮೇಲೆ ಏತಕ್ಕೋಸ್ಕರ ಅವರ ಬಗ್ಗೆ ಗಮನವನ್ನು ಹರಿಸಲಿಲ್ಲ ಎನ್ನುವುದನ್ನು ಹೇಳುವುದಕ್ಕೆ ಆಗುತ್ತದೆಯೆ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದನ್ನು ಬಿಡಲಿಲ್ಲ. ಅವರೂ ಕೂಡ ಮನವಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದು ಸರ್ಕಾರದ ಗಮನಕ್ಕೆ ಬಂದಿದೆ ಅವರಿಗೂ ಕೂಡ, ಅದನ್ನು ಪರಿಶೀಲನೆ ಮಾಡಿ ಕೊಡತಕ್ಕಂಥದ್ದು ಸಾಧುವಾಗಿದೆ ಎಂದು ತೀರ್ಮಾನವನ್ನು ತೆಗೆದುಕೊಂಡು ಅದನ್ನು ಎಫ್.ಡಿ.ಗೆ. ಕಳುಹಿಸಿದ್ದೇವೆ.

Smt. C. NAGAMMA KESHAVA MURTHY.—I want to know from the Hon. Minister whether it will be finalised before the next academic year starts?

Sri M. MALLIKARJUNASWAMY.—I hope so.